<u>ಓ.ಎಸ್. – 243/2022</u>

ಡಿ. ಡಬ್ಲೂ – 1

<u>ಸಾಕ್ಷಿಯನ್ನು ದಿಃ 31.01.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಎಂ.ಎಸ್.ಜಿ ರವರಿಂದಃ–</u>**

ನಿಡಿ–2 ರಲ್ಲಿ ನಿವೇಶನ ಸಂಖ್ಯೆ 20 ಎ ಎಂದು ಬರೆದಿಲ್ಲ. ನಿಡಿ–5 ರಂತೆ ಸಾಲ ಮರುಪಾವತಿಯನ್ನು ನನ್ನ ಮಾವ ಕೃಷ್ಣಾಚಾರಿರವರು ಮಾಡಿದ್ದಾರೆ. ನಿಡಿ–7 ರಲ್ಲಿ ಹಿಟ್ಟಿನ ಗಿರಣಿ ಇರುವ ಸ್ಥಳವನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಡಿ–12 ರಲ್ಲಿ ನಿವೇಶನದ ಖಾತೆ ನಂಬರ್ ನಮೂದಾಗಿಲ್ಲ ಎಂದರೆ ಸರಿ. ನನ್ನ ಮಾವ ಕೃಷ್ಣಾಚಾರಿಯವರಿಗೆ ಒಟ್ಟು ನಿವೇಶನಗಳು ಇವೆ ಎಂದು ನನಗೆ ಮಾಹಿತಿ ಇಲ್ಲ. ಸರ್ವೇ ನಂಬರ್ 33 ಮತ್ತು 36 ರ ನಿವೇಶನಗಳಲ್ಲಿ ನಮಗೆ ನಿವೇಶನವನ್ನು ನೀಡಿದ್ದಾರೆ ಎಂದು ಮುನ್ಸಿಪಾಲಿಟಿ ದಾಖಲೆಗಳಲ್ಲಿ ನಮೂದು ಇದೆ ಎಂದರೆ ಸರಿ. ನಿಡಿ–14 ಮತ್ತು 15 ರಲ್ಲಿ ಕಂಡ ಮನೆಗಳ ಪಶ್ಚಿಮ ದಿಕ್ಕಿಗೆ ನಿಡಿ–17 ರಲ್ಲಿ ಕಂಡ ನನ್ನ ಮನೆ ಇದೆ. ನಿಡಿ–17 ಮತ್ತು 18 ಒಂದೇ ಮನೆಯ ಫೋಟೋಗಳು. ನಿಡಿ–17 ಮತ್ತು 18 ರಲ್ಲಿ ಕಂಡ ಫೋಟೋಗಳಲ್ಲಿರುವ ಸ್ವತ್ತು ನಿವೇಶನ ಸಂಖ್ಯೆ 20 ಆಗಿದೆ.

ದಾವೆಯನ್ನು ದಾಖಲಿಸಿದ ನಂತರ ನಾನು ನಗರಸಭೆಯಿಂದ ಲೇ ಔಟ್ ನಕ್ಷೆಯನ್ನು ತೆಗೆದುಕೊಂಡಿದ್ದೇನೆ. ಅದನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ನಿಪಿ–19 ರಂತೆ ನಗರಸಭೆಯವರು ಭೀಮನೇರಿ ಗ್ರಾಮ ಪಂಚಾಯತಿಯವರಿಗೆ ನೀಡಿದ ನಕ್ಷೆಯಂತೆ ಲೇ ಔಟ್ ಅನ್ನು ಮಾಡಿದ್ದಾರೆ ಎಂದರೆ ಸರಿ. ನಿಪಿ–19 ರಲ್ಲಿ ನಿವೇಶನ ಸಂಖ್ಯೆ 20 ಎ ಎನ್ನುವ ಯಾವುದೇ ನಿವೇಶನ ರಚನೆಯಾಗಿಲ್ಲ ಎಂದರೆ ಸರಿ. ಮುಂದುವರೆದು ಇದು ಹಳೆ ನಕ್ಷೆ, ಆದ್ದರಿಂದ ರಚನೆ ಮಾಡಿಲ್ಲ ಎನ್ನುತ್ತಾರೆ. ನನಗೆ ನಿವೇಶನ ಸಂಖ್ಯೆ 20 ಎ ಗೆ ಸಂಬಂಧಪಟ್ಟಂತೆ ಯಾವಾಗ ನಕ್ಷೆಯನ್ನು ಮಾಡಿಕೊಟ್ಟರು ಎಂದು ನನಗೆ ನೆನಪಿಲ್ಲ. ನಿಪಿ–19 ರಲ್ಲಿ ಕಂಡ ನಿವೇಶನ ಸಂಖ್ಯೆ 307 ಅನ್ನು ನನ್ನ ಮಾವ ಕೃಷ್ಣಾಚಾರಿಯವರಿಗೆ ಹಾಗೂ ನಿವೇಶನ ಸಂಖ್ಯೆ 20 ಅನ್ನು ವಾದಿಗೆ ನೀಡಿದ್ದಾರೆ ಎಂದರೆ ಸರಿ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ ನಿವೇಶನ ಸಂಖ್ಯೆ 307 ಅನ್ನು ನಿಪಿ–19(ಎ) ಎಂದು, ನಿವೇಶನ ಸಂಖ್ಯೆ 20 ಅನ್ನು ನಿಪಿ–19(ಬಿ) ಎಂದು ಗುರುತಿಸಲಾಯಿತು.

ನಿಡಿ-2 ರಂತೆ ನಮ್ಮ ನಿವೇಶನ ಸಂಖ್ಯೆ 307 ರಲ್ಲಿರುವ ಮನೆಯ ವಿಸ್ತೀರ್ಣ 20 x 30 ಅಡಿಗಳು ಎಂದರೆ ಸರಿ. ನನ್ನ ಮಾವ ಕೃಷ್ಣಾಚಾರಿಯವರಿಗೆ ನೀಡಿದ ನಿವೇಶನ ಸಂಖ್ಯೆ 307 ರ ಪೂರ್ವ ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ನಿವೇಶನ ಸಂಖ್ಯೆ 308, ದಕ್ಷಿಣಕ್ಕೆ ನಿವೇಶನ ಸಂಖ್ಯೆ 306 ಎಂದರೆ ಸರಿ. ನಿವೇಶನ ಸಂಖ್ಯೆ 20 ಕ್ಕೆ ನಿವೇಶನ ಸಂಖ್ಯೆ 20 ಎ ಎಂದು ಉಪ ನಂಬರ್ ಅನ್ನು ನೀಡಿದ ಬಗ್ಗೆ ಏನಾದರೂ ಆದೇಶವಿದೆಯೇ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹೇಳಿದಂತೆ ನಿವೇಶನ ಸಂಖ್ಯೆ 20 ಎ ಎನ್ನುವುದು, ನಿವೇಶನ ಸಂಖ್ಯೆ 20 ರ ಅಕ್ಕ ಪಕ್ಕದಲ್ಲಿ ಇಲ್ಲ ಎಂದರೆ, ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನ ಪೂರ್ವಕ್ಕೆ ನಿವೇಶನ ಸಂಖ್ಯೆ 21 ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. ದಕ್ಷಿಣಕ್ಕೆ ನಿವೇಶನ ಸಂಖ್ಯೆ 36 ಇದೆ ಎಂದರೆ ಸರಿ. ದಿನಾಂಕ 30.06.2016 ರಂದು ದಾವಾ ಸ್ವತ್ತಿಗೆ ನಾನು ಮಾಸಿಕ 2,500/- ರೂ. ಬಾಡಿಗೆ ಕೊಡುವ ಷರತ್ತಿಗೆ ಒಪ್ಪಿ ಬಾಡಿಗೆದಾರನಾಗಿ ಬಂದಿದ್ದೇನೆ ಎಂದರೆ ಸರಿಯಲ್ಲ. ಅಕ್ಟೋಬರ್ 2021 ರವರೆಗೆ ನಾನು ಪ್ರತೀ ತಿಂಗಳು ಬಾಡಿಗೆಯನ್ನು ಕೊಟ್ಟಿದ್ದು, ಆನಂತರ ಬಾಡಿಗೆಯನ್ನು ಕೊಡಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 30.11.2022 ರವರೆಗೆ ಒಟ್ಟು 32,500/- ರೂ. ಬಾಡಿಗೆಯನ್ನು ನಾನು ಬಾಕಿ ಉಳಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ಬಾಡಿಗೆಯನ್ನು ನಾನು ಪಾವತಿ ಮಾಡಿದಾಗ ಒಂದು ಪುಸ್ತಕದಲ್ಲಿ ಬರೆಸಿಕೊಳ್ಳುತ್ತಿದ್ದು, ಆ ಪುಸ್ತಕ ನನ್ನ ಬಳಿ ಇದೆ ಎಂದರೆ ಸರಿಯಲ್ಲ.

ನಾನು ಶ್ರೀಧರ ನಗರದ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷನಾಗಿದ್ದೆ ಎಂದರೆ ಸರಿ. ಸಾಗರದಲ್ಲಿ ಕಲಾವಿದರಿಗೆ ನಾನು ನಿರ್ದೇಶನ ನೀಡುತ್ತೇನೆ ಎಂದರೆ ಸರಿ. ನಾನು ಶಾಲಾಭಿವೃದ್ಧಿ ಸಮಿತಿಯ ಹಾಗೂ ಕಲಾವಿದರಿಗೆ ನಿರ್ದೇಶನ ನೀಡುವುದರ ಮೂಲಕ ಹೆಚ್ಚು ಜನರ ವಿಶ್ವಾಸ ಗಳಿಸಿದ್ದೇನೆ ಎಂದರೆ ಸರಿ. ಆ ಕಾರಣದಿಂದ ವಾದಿಯಿಂದ ದಾವಾ ಸ್ವತ್ತನ್ನು ಮೌಖಿಕವಾಗಿ ಬಾಡಿಗೆಗೆ ಪಡೆದಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ನಾನು ದಾವಾ ಸ್ವತ್ತನ್ನು ಬಿಟ್ಟು ಕೊಡಲು ಹಾಗೂ ಬಾಕಿ ಇರುವ ಬಾಡಿಗೆಯನ್ನು ಕೊಡಲು ಬಾಧ್ಯನಾಗಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.